ಸಭೆಯಂ ಮುಂದಿಡಲಾದ ಕಾಗದ ಪತ್ರಗಳು

೧೨-೦೦ ಮಧ್ಯಾಹ್ನ

ಅಧ್ಯಕ್ಷರು.—ಈಗ ಸಭೆಯಂ ಮುಂದೆ ಇಡಲಾಗುವ ಕಾಗದ ಪತ್ರಗಳು. ಮಾನ್ಯ ಸಚಿವರಾದ ಶ್ರೀ ಬಿ. ರಾಚಯ್ಯನವರು ತಮ್ಮ ಹೆಸರಿನಲ್ಲಿರುವ ಕಾಗದ ಪತ್ರಗಳನ್ನು ಸಭೆಯ ಮುಂದಿಡುವುದು.

ಶ್ರೀ ಬಿ. ರಾಚಯ್ಯ.—ಮಾನ್ಯ ಅಧ್ಯಕ್ಷರೇ ದಿನಾಂಕ ೧೯೫೨ನೇ ಇಸವಿಯ ತನಿಖಾ ಆಯೋಗಗಳ ಕಾಯಿದೆಯ ೩(೪)ನೇ ಕಲಮಿನ ಮೇರೆಗೆ, ದಿನಾಂಕ ೨೦ನೇ ಮಾರ್ಚ್ ೧೯೬೬ರಂದು ಚಂದ್ರಗುತ್ತಿಯಲ್ಲಿ ನಡೆದ ಬೆತ್ತಲೆ ಸೇವೆ ಪ್ರಕರಣದ ಬಗ್ಗೆ ಶ್ರೀ ಚನ್ನವೀರಪ್ಪ ವಿಚಾರಣಾ ಆಯೋಗದ ವರದಿಯನ್ನು ಹಾಗೂ ಅದರ ಮೇಲೆ ಸರ್ಕಾರದವರು ತೆಗೆದುಕೊಂಡ ಕ್ರಮಗಳ ಬಗ್ಗೆ ಜ್ಞಾಪನ ಪತ್ರದೊಂದಿಗೆ ಸಭೆಯ ಮುಂದಿಡುತ್ತೇನೆ, ಮತ್ತು ರೆಕ್ಟಿಫೈಡ್ ಸ್ಪಿರಿಟನ್ನು ರಫ್ತು ಮಾಡಿರುವ ಬಗ್ಗೆ ಶ್ರೀ ಬೋಪಣ್ಣ ತನಿಖಾ ಆಯೋಗದ ವರದಿಯನ್ನು ಹಾಗೂ ಅದರ ಮೇಲೆ ಸರ್ಕಾರದವರು ತೆಗೆದುಕೊಂಡ ಕ್ರಮಗಳ ಬಗ್ಗೆ ಜ್ಞಾಪನಾ ಪತ್ರವನ್ನು ಸಭೆಯ ಮುಂದಿಡುತ್ತೇನೆ.

ಅಧ್ಯಕ್ಷರು.—ಕಾಗದ ಪತ್ರಗಳನ್ನು ಸಭೆಯ ಮುಂದಿಡಲಾಯಿತು.

ವರದಿಗಳನ್ನು ಒಪ್ಪಿಸುವುದು

ಶ್ರೀ ಕೆ. ಅಮರನಾಥ ಶೆಟ್ಟಿ.—ಮಾನ್ಯ ಅಧ್ಯಕ್ಷರೇ ಸಭೆಯ ಮುಂದಿಟ್ಟ ಕಾಗದ ಪತ್ರಗಳ ಸಮಿತಿಯ ಮೊದಲನೇ ವರದಿಯನ್ನು ಸಭೆಯ ಮುಂದಿಡುತ್ತೇನೆ.

ಅಧ್ಯಕ್ಷರು.—ವರದಿಯನ್ನು ಸಭೆಗೆ ಒಪ್ಪಿಸಲಾಗಿದೆ,

ಶ್ರೀ ಕೆ.ಎಚ್.ಪಾಟೀಲ್.—ಮಾನ್ಯ ಅಧ್ಯಕ್ಷರೇ ನಾನು ಶುಕ್ರವಾರದಂದು ಒಂದು ನೋಟೀಸನ್ನು ಕಳುಹಿಸಿಕೊಟ್ಟಿದ್ದೆ. ಅದನ್ನು ಸೋಮವಾರದಂದು ತೆಗೆದುಕೊಳ್ಳುವುದಾಗಿ ಹೇಳಿದ್ದಿರಿ.

ಅಧ್ಯಕ್ಷರು.—ಅದನ್ನು ನಾಳೆ ತೆಗೆದುಕೊಳ್ಳಲಾಗುತ್ತದೆ.

ಶ್ರೀ ಕೆ. ಎಚ್. ಪಾಟೀಲ್.—ಆಯಿತು.

ಅಧ್ಯಕ್ಷರು.—ಈಗ ಗವರ್ನರ ಸೆಳೆಯುವ ಸೂಚನೆ.

ಶ್ರೀಮತಿ ಕೆ. ಎಸ್. ನಾಗರತ್ನಮ್ಮ.—ಮಾನ್ಯ ಅಧ್ಯಕ್ಷರೇ, ಮಾನ್ಯ ಸದಸ್ಯರಾದ ಟಿ. ಆರ್. ಶಾಮಣ್ಣನವರು ಪೆಟ್ರೋಲ್ ಮೇಲೆ ಕುಳಿತು ಧರಣಿ ಮಾಡುತ್ತಿದ್ದರು. ಅವರು ಕೇಳುತ್ತಿರುವ ಬೇಡಿಕೆ ನ್ಯಾಯವಾದ ಬೇಡಿಕೆಯಾಗಿದೆ.

ಅಧ್ಯಕ್ಷರು.—ತಾವು ಯಾವ ರೂಲ್ಸ್ ಪ್ರಕಾರ ಇದನ್ನು ಕೇಳುತ್ತಿರುವಿರಿ.

ಶ್ರೀಮತಿ ಕೆ. ಎಸ್. ನಾಗರತ್ನಮ್ಮ.—ಮಾನ್ಯ ಅಧ್ಯಕ್ಷರೇ ಶ್ರೀಯುತ ಶಾಮಣ್ಣನವರು ಹಿರಿಯ ಸದಸ್ಯರು, ಪಯಸ್ಸಾದವರು, ಪಾರ್ಲಿಮೆಂಟ್ ಸದಸ್ಯರಾಗಿದ್ದವರು, ಈಗ ಪ್ರಸ್ತುತ ಎಂ.ಎಲ್.ಸಿ. ಕೂಡ ಆಗಿರುತ್ತಾರೆ. ಅವರು ಕೇಳುತ್ತಿರುವ ಬೇಡಿಕೆ ನ್ಯಾಯಯುತವಾಗಿದೆ...

ಅಧ್ಯಕ್ಷರು.—ಸಂಬಂಧಪಟ್ಟ ಸಚಿವರು ಆಮೇಲೆ ಉತ್ತರವನ್ನು ಕೊಡುತ್ತಾರೆ. ಈಗ ಗವರ್ನರ ಸೆಳೆಯುವ ಸೂಚನೆಯನ್ನು ತೆಗೆದುಕೊಳ್ಳಲಾಗುತ್ತದೆ, ಮಾನ್ಯ ಸದಸ್ಯರಾದ ಶ್ರೀ ಎಂ. ಎಸ್. ಕೃಷ್ಣನ್, ಶ್ರೀ ಪಂಪಾಪತಿ, ಶ್ರೀ ಕೆ. ಬಿ. ಶಾಣಪ್ಪ ಮತ್ತು ಶ್ರೀ ಯು. ಭೂಪತಿಯವರು ಮಾನ್ಯ ಸಚಿವರ ಗಮನ ಸೆಳೆಯಬೇಕೆಂದು ಹೇಳುತ್ತೇನೆ.

ಗಮನ ಸೆಳೆಯುವ ಸೂಚನೆ

ಚಂದ್ರಗುತ್ತಿ ಎಲ್ಲಮ್ಮನ ಜಾತ್ರೆಯಲ್ಲಿ ನಡೆದ ಅನಾಹುತದ ಬಗ್ಗೆ

ಶ್ರೀ ಎಂ. ಎಸ್. ಕೃಷ್ಣನ್.—ಮಾನ್ಯ ಅಧ್ಯಕ್ಷರೇ ಎರಡು ವರ್ಷಗಳ ಹಿಂದೆ ಚಂದ್ರಗುತ್ತಿಯಲ್ಲಿ ಎಲ್ಲಮ್ಮನ ಜಾತ್ರೆಯಲ್ಲಿ ನಡೆದ ಅನಾಹುತದ ಬಗ್ಗೆ ಮಾನ್ಯ ಕಂದಾಯ, ಯೋಜನೆ ಮತ್ತು ಕಾರ್ಮಿಕ ಮಂತ್ರಿಯವರ ಗಮನವನ್ನು ಸೆಳೆಯುತ್ತೇನೆ.